32	ಮೂಡಬಿದ್ರೆ	ಸ.ಹಿ.ಪ್ರಾ.ಶಾಲೆ ಇರುವೈಲು
33	ಮೂಡಬಿದ್ರೆ	ಸ.ಹಿ.ಪ್ರಾ.ಶಾಲೆ ಪೂಪಾಡಿ ಕಲ್ಲು
34	ಮೂಡಬಿದ್ರೆ	ಸ.ಹಿ.ಪ್ರಾ.ಶಾಲೆ ಪುಚ್ಚಮೊಗರು
35	ಮೂಡಬಿದ್ರೆ	ಸ.ಹಿ.ಪ್ರಾ.ಶಾಲೆ ಮಾರೂರು ಹೊಸಂಗಡಿ
36	ಮೂಡಬಿದ್ರೆ	ಸ.ಹಿ.ಪ್ರಾ.ಶಾಲೆ ಪಡುಕೊಣಾಜೆ
37	ಮೂಡಬಿದ್ರೆ	ಸ.ಹಿ.ಪ್ರಾ.ಶಾಲೆ ನೀರ್ಕೆರೆ
38	ಮೂಡಬಿದ್ರೆ	ಸ.ಹಿ.ಪ್ರಾ.ಶಾಲೆ ಮಾಂಟ್ರಾಡಿ
39	ಮೂಡಬಿದ್ರೆ	ಸ.ಹಿ.ಪ್ರಾ.ಶಾಲೆ ಮೂಡಬಿದ್ರೆ ಮೈನ್
40	ಮೂಡಬಿದ್ರೆ	ಸ.ಹಿ.ಪ್ರಾ.ಶಾಲೆ ಬೆಳುವಾಯಿ ಮೈನ್

ಸಹ ನಿರ್ದೇಶಕರು (ಕಾರ್ಯಕ್ರಮಗಳು)
ಸರ್ವ ಶಿಕ್ಷಣ ಅಭಿಯಾನ

ಓಂಬುಡ್ಸ್‌ಮನ್‌ಗಳಿಗೆ ಕಛೇರಿ ಕೊಠಡಿ ಹಂಚಿಕೆ

405 (973) ಶ್ರೀ ಅಭಯಚಂದ್ರ ಜೈನ್. ಕೆ (ಮೂಡುಬಿದ್ರಿ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಪಂಚಾಯಿತಿ ಡೆವಲಪ್‌ಮೆಂಟ್ ಆಫೀಸರ್ಸ್/ಓಂಬುಡ್ಸ್‌ಮನ್‌ಗಳಿಗೆ ತಾಲ್ಲೂಕು ಪಂಚಾಯಿತಿ ಸಮಿತಿ ಕಚೇರಿಯಲ್ಲಿ ಪ್ರತ್ಯೇಕವಾಗಿ ಕಚೇರಿ ಕೊಠಡಿಗಳನ್ನು ಮಂಜೂರು ಮಾಡಲಾಗುವುದೇ;

(ಆ) ಹಾಗಿದ್ದಲ್ಲಿ, ಈ ಅಧಿಕಾರಿಗಳ ಕೊಠಡಿಗಳ ನಿರ್ಮಾಣಕ್ಕೆ ಸರ್ಕಾರ ಹಣವನ್ನು ಬಿಡುಗಡೆಗೊಳಿಸುವುದೇ?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು):–

(ಅ) ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ಗ್ರಾಮ ಪಂಚಾಯಿತಿಗಳಿಗೆ ನೇಮಕಾತಿ ಮಾಡಲಾಗಿರುವುದರಿಂದ ಅವರುಗಳು ಗ್ರಾಮ ಪಂಚಾಯಿತಿ ಕಛೇರಿಗಳಲ್ಲಿ

ಕರ್ತವ್ಯ ನಿರ್ವಹಿಸುತ್ತಾರೆ. ಆದ್ದರಿಂದ ಅವರಿಗೆ ತಾಲ್ಲೂಕು ಪಂಚಾಯಿತಿ ಸಮಿತಿ ಕಚೇರಿಯಲ್ಲಿ ಪ್ರತ್ಯೇಕವಾಗಿ ಕಚೇರಿ ಕೊಠಡಿಗಳನ್ನು ಮಂಜೂರು ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನೇಮಕವಾಗುವ ಓಂಬುಡ್ಸ್‌ಮನ್‌ಗಳಿಗೆ ಜಿಲ್ಲಾ ಪಂಚಾಯತಿ ಕಛೇರಿಯಲ್ಲಿ ಸ್ಥಳಾವಕಾಶ ಕಲ್ಪಿಸಲು ಕ್ರಮ ವಹಿಸಲಾಗಿದೆ.

(ಆ) ಓಂಬುಡ್ಸ್‌ಮನ್‌ಗಳ ಕಛೇರಿಯ ಆಡಳಿತ ವೆಚ್ಚಕ್ಕೆ ತಗಲುವ ವೆಚ್ಚವನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಶೇಕಡಾ 6 ಆಡಳಿತ ವೆಚ್ಚದಲ್ಲಿ ಒದಗಿಸಲಾಗಿದೆ.

ಕೂಲಿ ಕಾರ್ಮಿಕರಿಗೆ ಇ.ಎಸ್.ಐ ಮತ್ತು ಪಿ.ಎಫ್. ಸೌಲಭ್ಯ ನೀಡುವುದು

412 (502) ಶ್ರೀ ಬಂಡೆಪ್ಪ ಕಾಶೆಂಪೂರ್(ಬೀದರ್ ದಕ್ಷಿಣ) ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಎನ್.ಆರ್.ಇ.ಜಿ.ಎಸ್. ಸ್ಕೀಮ್‌ನಲ್ಲಿ ಮಾಡುತ್ತಿರುವ ಗ್ರಾಮೀಣ ಕೂಲಿ ಕಾರ್ಮಿಕರಿಗೆ ನೀಡುತ್ತಿರುವ ಸೌಲಭ್ಯಗಳಾವುವು (ವಿವರ ನೀಡುವುದು);

(ಆ) ಈ ಕೂಲಿ ಕಾರ್ಮಿಕರುಗಳಿಗೆ ಇ.ಎಸ್.ಐ ಮತ್ತು ಪಿ.ಎಫ್ ಸೌಲಭ್ಯವನ್ನು ನೀಡಲಾತ್ತಿದೆಯೇ;

(ಇ) ಹಾಗಿದ್ದಲ್ಲಿ, ಇದಕ್ಕೆ ರಾಜ್ಯದ ಮತ್ತು ಕೇಂದ್ರ ಸರ್ಕಾರದ ಪಾಲೆಷ್ಟು;

(ಈ) ಇವರುಗಳಿಗೆ ವಿಮಾ ಪಾಲಿಸಿ ಯೋಜನೆಯನ್ನು ಸರ್ಕಾರದ ವತಿಯಿಂದ ದೊರಕಿಸಿಕೊಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ;

(ಉ) ಹಾಗಿದ್ದಲ್ಲಿ, ಎಂದು ದೊರಕಿಸಿಕೊಡಲಾಗುವುದು (ವಿವರ ನೀಡುವುದು)?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು):–

(ಅ) ಕಾಮಗಾರಿ ನಡೆಯುವ ಸ್ಥಳದಲ್ಲಿ, ಶುದ್ಧ ಕುಡಿಯುವ ನೀರು, ಕೂಲಿಕಾರರ ಮತ್ತು ಮಕ್ಕಳ ವಿಶ್ರಾಂತಿಗಾಗಿ ನೆರಳು, ಕೆಲಸ ಮಾಡುವ ಸಮಯದಲ್ಲಿ ಆಗಬಹುದಾದ ಸಣ್ಣ ಪುಟ್ಟ ಗಾಯಗಳು, ಇತ್ಯಾದಿಗಳ ಪ್ರಥಮ ಚಿಕಿತ್ಸೆಗಾಗಿ ಪ್ರಥಮ ಚಿಕಿತ್ಸೆ ಪೆಟ್ಟಿಗೆ ಮತ್ತು 6 ವರ್ಷಕ್ಕಿಂತ ಕಡಿಮೆ ಇರುವ ಐದಕ್ಕಿಂತ ಹೆಚ್ಚಿನ ಮಕ್ಕಳು ಕಾರ್ಮಿಕರೊಂದಿಗೆ ಬಂದಲ್ಲಿ, ಅವರನ್ನು ನೋಡಿಕೊಳ್ಳಲು ಓರ್ವ ಮಹಿಳೆಯನ್ನು ನೇಮಕ ಮಾಡುವುದು, ಕಾಮಗಾರಿಯ ಸ್ಥಳದಲ್ಲಿ ಕಾಮಗಾರಿಗೆ ಸಂಬಂಧಿಸಿದಂತೆ ಕಾರ್ಮಿಕರಿಗೆ ಗಾಯಗಳಾದಲ್ಲಿ